

ಮಾಡುವುದು ಮತ್ತು ಅನ್ನ ಸಾರು ಮಾಡುವುದನ್ನು ಅನಿವಾರ್ಯವಾಗಿ ಕಲಿತಳು. ಎಮ್ಮೆ ದನಗಳ ಕೊಟ್ಟಿಗೆಯನ್ನು ಸ್ವಚ್ಛ ಮಾಡುವ ಜವಾಬ್ದಾರಿಯನ್ನು ಹೊತ್ತಳು. ಮನೆಗೆಲಸದ ಜೊತೆಗೆ ಮದುವೆಯಾದ ಮೂರು ತಿಂಗಳಲ್ಲೇ ಕುಟುಂಬದವರೊಡನೆ ಕೃಷಿ ಕಾರ್ಯಕ್ಕೂ ಇಳಿದಳು. ಮನೆಗಿಂತ ಹೊಲ ಹೆಚ್ಚು ಆಪ್ತವಾಯಿತು. ಮನುಷ್ಯರಿಗಿಂತ ಎಮ್ಮೆ ದನಗಳ ಸಾಂಗತ್ಯವೇ ಸವಿ ಎನಿಸಿತು.

ವಿಧುರ ಮಾವ, ವಯಸ್ಕ ನಾದಿನಿಯರ ಉಪಟಳ, ಕಿರಿಕಿರಿ ಎಲ್ಲೆ ಮೀರಿತ್ತು. ಮನೆಯಲ್ಲಿ ಏನನ್ನೂ ಹೇಳುವಂತಿರಲಿಲ್ಲ. ಏಕೆಂದರೆ, ಯಾರಿಗೂ ಕೇಳುವ ಕಿವಿ ಇರಲಿಲ್ಲ. ಬರೀ ಆರ್ಭಟಿಸುವ ಬಾಯಿ ಮತ್ತು ಕೆಕ್ಕರಿಸುವ ಕಣ್ಣುಗಳು. ಅಪ್ಪ ಸದಾ ಮುಂಗೋಪಿ. ಯಾವಾಗಲೂ ಮೂಗಿನ ತುದಿಯಲ್ಲೇ ಕೋಪದ ಕುಣಿತ. ಆದರೆ ತಂದೆಯ ಭಯ ಮತ್ತು ತಂಗಿ ತಮ್ಮಂದಿರ ಮೇಲಿನ ಅಭಿಮಾನದೆದುರು ತಾಯಿಯ ಭಾವನೆಗಳ ಕುರಿತು ನಿರ್ಲಿಪ್ತ ಭಾವ. ಕುಟುಂಬದ ಮೇಲಿನ ಮೋಹವೇ ಹೆಚ್ಚು. ಮದುವೆಯಾಗಿದ್ದರೂ ಪ್ರಸ್ತವಾಗದ ಹೆಂಡತಿ ಮೇಲೆ ಅಷ್ಟೊಂದು ಮೋಹ ಇರಲಿಲ್ಲ. ಮದುವೆಯಾದ ಮೂರು ವರುಷಗಳ